# Lahari Communique

NEWS LETTER FOR PRIVATE CIRCULATION AMONG THE LEGAL FRATERNITY

**Volume 15** **October 2003** **Part 7**


## Jagadish elected

In the general body meeting of the Advocates Association, Bangalore held on 11.10.2003 the following were elected as the office bearers for the period 2003-05. President : Mr. D. L. Jagadish; General Secretary : Mr. C.R. Gopalaswamy; Treasurer : Mr. A.P. Ranganatha.



President



General Secretary



Treasurer

The following members were elected as Governing Councillors. High Court Unit : Mr. T.S. Amarkumar, Mr. N.B. Patil, Mr. M. Sudhakar Pai, Mr. Honnappa, Mr. Maheshwaraswamy Hirematt, Ms. Sandhya Jamadagni and Ms. V. Sushma; City Unit : Mr. M.S. Nandish Gowda, Mr. H.V. Praveen Gowda, Mr. D.S. Rajashekar, Mr. S. Harish, Mr. B. Balakrishna, Mr. T.G. Ravi, Mr. C. Shankar Reddy, Mr. K.P. Appaiah, Mr. N. Madesh, Mr. G. Lokesha Gowda, Mr. N. Shivakumar and Ms. G. Jayashree; Magistrates' court unit : Mr. D.N. Linge Gowda, Mr. Shivashankar, Mr. N. Udaya kumar, Mr. R. Rajashekar and Mr. C.N. Naganna; Mayohall Unit : Mr. Bhaktavachala, Mr. A.P. Natesh, Mr. M.N. Shivakumar, Mr. V. Harihara and Mr. G.R. Anil Ghosh.

## Appointments

The Governor has appointed 23 Civil Judges (junior division) selected under the Karnataka Judicial Services (recruitment) Rules 1983. Following the list of appointments.

Messrs S. R. Manikya, Mysore; H.S. Manjunath, Bhadravathi; Kulkarni Renuka Gangadhar, Dharwad; S.V. Srikanth, Bangalore; Venkatesh, Raichur; Mansoor Ahmed Zaman, Kolar; Karabari Ravindra, Bidar; B.N. Sujatha, Bangalore Rural; Roopa Ramarao Kulkarni, Gadag; Vithal Vishnupat Joshi, Bangalore; Hiremath Shobharani Babayya, Udupi; Shrikaveri B. Kalmath, Dharwad; G.V. Chandrashekar, Dharwad; Mallari Chidambarrao Nadagouda, Dharwad; Somashekar G. Badamai, Haveri; Dindlkopp Shivaputra; Dharwad; Sunil Andanappa Shettar, Bagalkot; K.G. Chinthna, Bangalore; Rajkumar Siddappa Amminbhavi, Belgaum; Annugouda Veeragouda Patil, Belgaum; Kulkarni Narahari, Dharwad; Veena Mallanaik Naikar, Gokak and Sabappa, Gulbarga.


## National Judicial Academy

In the first week of october Prof. N.R. Madhava Menon, Former director of the National Law School in Bangalore, has took charge as the first director of the National Judicial Academy (NJA) in Bhopal. Mr. Menon also served as vice-chancellor of West Bengal University of Judicial sciences. The academy, dedicated to the nation by President Dr. A.P.J. Abdul Kalam in September 2002, is the national centre for research in judicial administration and for training.

## Remarkable legacy

Former Chief Justice D.M. Chandra Shekar, who died during the month, died as a testator. In his will he had desired that his eyes be donated to an eye bank and his body to a medical college. He had also reserved certain amounts to be paid to philothropic charities. A remarkable legacy in deed.

## Jay Pee elected President



Mr. N. Jaiprakash Rao, Advocate, has taken over as new President of the Bangalore Advocates Co-operative Society Ltd. He replaces Mr. N.S. Satyanarayana Gupta, the outgoint President. Ms. L.S. Sheela, Advocate, has taken over as the new Vice-President. These elections were unanimous.

## Extension granted

The Government of Karnataka has issued a notification dated 6.10.2003 granting an extension of 2 years to the following special public prosecutors earlier appointed as to the fast track courts :

Mr. Y.R. Jagadish, Mr. B. Vishweshwaraiah (Bangalore City), Mr. K.V. Keshav (Bangalore Rural), Mr. S.B. Patil (Belgaum), Mr. H.S. Sharanabasavana Gowda (Bellary), Mr. F.B. Amarannanavar (Dharwad), Mr. Mahanthesh Erappa Shigli (Gadag), Ms. Sangeetha Bhadrashetty (Gulbarga), Mr. M.B. Poovanna (Kodagu), Mr. B.R. Amare Gowda (Koppal), Mr. E.R. Kotrappa (Chitradurga), Mr. V.B. Patil (Raichur). Mr. N. Jayadev has been appointed as the Public Prosecutor in fast track court, Davanagere in the vacancy caused by retirement of Mr. H.M. Veerabhadraiah.

## ILR Subscription

The Karnataka Law reporting Council has revised the subscription rate for ILR 2004 to Rs. 760/- The previous subscription rate for despatch by certificate of posting was Rs. 710/

## Around the Courts

**☐ Double Taxation Avoidance Convention (DTAC) - held - Parliament to take note of Joint Parliamentary Committee (JPC) recommendations;**

On October 10th, noting the enormous fiscal benefits of Double Taxation Advoidance Convention (DTAC) between India and Mauritius, the Supreme Court has said that the recommendations of Joint Parliamentary Committee (JPC) for incorporating built-in safe-guards in the treaty to check tax evasion was for Parliament to take note of.

Upholding validity of DTAC, a Bench comprising Justice Rumapal and Justice B. N. Srikrishna said in a recent judgment that "in our view recommendations of the working group of the JPC are intended for Parliament to take appropriate action".Under the DTAC, any foreign company after obtaining a residency certificate from Mauritius could do business in India without being liable to pay tax on capital gains.

Petitioner Azadi Bachao Andolan had alleged that under DTAC, many foreign firms registered themselves in Mauritius to earn huge profits in India through their investments as they enjoyed complete exemption from tax liability.

While considering the causes which led to the stock market scam, the JPC had occassion to consider the working of the Indo-Maurtius DTAC. It noticed that areawise Foreign Direct Investment (FDI) inflow from Mauritius increased from Rs. 37.5 million in 1993 to Rs. 61672.8 million in 2001.

Taking note of the facts and the reluctance of the Government of Mauritius in the matter to negotiate the terms of treaty, the JPC had recommended that though the exact amount of revenue loss could not be quantified "it could be assumed to be substantial".

see page 3

> *The glory of lawyers, like that of men of science, is more corporate than individual* ***Oliver Wendell Holmes***

# Vote for a change

The recent election to the Advocates Association has proved that the members wanted a change in leadership. The change brought about is so drastic that almost all office bearers failed to secure renewed acceptence from the members. The pattern of voting suggests that the electorate has decided much before the elections to replace the old guard. The negative upswing in voting has demonstrated that an average voter impressed his no-confidence in the outgoing team and their alround failure.

It is a happy sign that the new President has positively reacted in the outcome of the result by making a statement that "Restoring the lost image of the Association is my primary task". He also further asserted that it was a verdict against those "who failed to protect the sanctity of the legal profession". If one would recall that during the past decade the image of the profession has considerably gone down as a result of lack of positive leadership. It is hoped that the new President would stick to this task of image-building with the co-operation of all the concerned.

The verdict in this election is certainly against the hegemonic ambitions of certain individuals who desired to perpetuate their leadership. Further more the verdict has also established that no person is indispensable for managing an organisation. It has also felt a severe blow against the personal ambitions of individuals and their desire to abuse the office for personal aggrandizement.

It is evident that for the purpose of seeking office lots malpractices were adopted in the past including allurement of members to vote in a particular way. It is another thing that all such attempts failed to influence the members in taking their own decision as to the pattern of voting. It is hightime that the new incumbent leaders would take steps to eradicate this scourge at least in future elections.

Helping the members to derive certain personal benefits like obtaining a driving license, ration card or a gas connection may be in the interest of members. But using those concepts to allure members to vote in a particular way may not be justified. The members have understood the actual motive behind such measures but took their independent decision while exercising franchise. This is a happy augery considering the professional interest.

A tendency has also grown during the past decade that persons should get elected everywhere. Not withstanding the holding of political office the desire is to acquire the leadership of Bar Associations. This tendency to be in office in every possible organisation simultaneously and or use the leadership of the professional bodies as a diving board to achieve political leadership is not in the best interest of professional organizations. This election is also shown the way that professional interest is not subservient to political interest.

While the members of the profession have high expectancy about the possible changes from the new leadership is also a challenge to the incumbents to bring about qualitative changes in the functioning of the Bar Association. Hope that the new leadership would standby the reasonable expectations of the members.


**A.I.R. SUPREME COURT (A.I.R.S.C.)**

| YEAR | PRICE PER YEAR |
|---|---|
| 1950 to 1955 | Rs. 325/- |
| 1956 to 1960 | Rs. 460/- |
| 1961 to 1965 | Rs. 750/- |
| 1966 to 1970 | Rs. 850/- |
| 1971 to 1990 | Rs. 950/- |
| 1991 to 1995 | Rs. 1050/- |
| 1996 to 2000 | Rs. 1500/- |
| 2001 & 2002 | Rs. 1700/- |

**Contact : A.K. Fadnis**
**AMEYA LAW AGENCY**
**LAW BOOKSELLERS**
**# 2/2, Mayura mansion**
**1st Cross, Gandhinagar**
**Opp. Hotel Kamat Yatri Nivas**
**Bangalore-560 009.**
**Ph. : 9844115016**


# Internet Dumping

**John Corker** and **Gautham Srinivas**

*From last issue*

It is also likely that there are a number of people who are too embarrassed to complain or unaware of how to complain. When the Mr. Sidebottom started talking about the issue in the media, he said this resulted in dozens of families in his electorate with excessive phone bills ranging from $200 to $5000 contacting his office.

As at the end of 2002, 85.4 percent of internet dumping complaints were in relation to 190 numbers, the balance being in relation to international 0011 numbers.

**Australian framework**

**TIO's role**

The TIO administers the telecommunications complaints scheme for carriers and carriage service providers in Australia. ISPs are required to participate in the scheme by reason of being considered carriage service providers. The TIO has acknowledged that a major difficulty in investigating internet dumping cases has been to establish whether or not a user was in fact notified of call charges. A key issue that has been raised in their investigations is the place, adequacy and visibility of notices.

Where a complainant denies ever having visited the site or sites in question, the TIO investigates the matter with the telephone service provider. Where the complainant admits being at such sites but denies seeing any warnings, or claims they did not proceed after seeing warnings, then the matter is referred to the Telephone Information Services Standards Council (TISSC) to take up the matter with the 190 service provider.

**TISSC's role**

TISSC is an independent regulatory body funded by the telephone information services industry. It is made up of four community and four industry members (two from the service provider sector and two from the carrier sector) and an independent chairman.

The TISSC Code of Practice deals only with domestic premium rate services, that is, calls beginning with the prefix 190. Compliance with the TISSC code provisions is enforceable by being made a term of the agreement between the service provider and the carrier.

Section C8 of the TISSC code deals exclusively with 'internet dialler services'. It was introduced in July 2001 and amended to address fixed rate internet diallers in October 2002. It sets out provisions that require service providers to display, in a separate fixed dialogue box prior to connection to the service, a 16 point font message that provides the 190 number and the premium call rate and requires the user to click to accept the rate before proceeding. A further dialog box requires the user to click on YES to indicate he or she is the bill payer or has the bill payer's permission to accept these charges.

The provisions also state that dialling and modem tones are not to be suppressed, a digital clock is to be displayed showing the time elapsed for the call and every 10 minutes a separate dialog box is to appear showing the time elapsed and displaying an OK button that when clicked on makes the dialog box disappear. At any point if the user clicks on an EXIT box, the existing ISP default connection is to be maintained.

The TISSC code also states that internet diallers must not activate a premium rate service remotely without the intervention and informed consent of the user (addressing the possible use of trojans).

The TISSC website (<www.190 complaints.com.au>) simplifies the process for members of the public to lodge complaints against premium service providers and has very useful information about how dumping occurs and what to do about it. The site also contains a list of premium service providers and statistical summaries of complaints lodged against individual service providers.

Of particular note is a case history which shos TISSC being successful in having a 190 service provider refund phone charges to an internet user where inadequate notice of the charges to be incurred was displayed.

*to be continued*

## Around the Courts

*From first page*

☐ **Variations in oral evidence-vis-a-vis-statement under Sec. 162 Cr PC-cannot be a ground to disbelieve the witness version;**

On October 20th the Supreme Court has ruled that a witness cannot be disbelieved on the ground that there are mere variations in his statements which have not altered the facts of the case. No witness can reproduce his statement in a precise mathematical manner, a division Bench comprising Mr. Justice Doraiswamy Raju and Mr. Justice Arijit Pasayat held.

It is only when exaggerations fundamentally change the nature of the case that the court has to consider whether the witness was telling the truth or not, the Bench said, while dismissing a petition challenging a Delhi High Court's verdict convicting one Sushil Kumar for murdering a man on a trivial ground that he had severed his association with a eunuch. "Merely because of the fact that there were some minor omissions, which are but natural, considering the fact that the examination in court took place years after the occurence, the evidence does not become suspect", the Bench said.

The trial court had relied on the eye-witness account to convict Sushil Kumar, who had alleged that the witness was not trustworthy as his statement before police and the court was materially different. "Minor details which are not indicated in the FIR are later on elaborated in court. This does not justify a criticism that the case originally presented has been abondoned to be substituted by another one" the court said.

## News Panorama

☐ A high school student has the right to wear a T-shirt to school with the face of president George W. Bush and the words "International Terrorist" on the front, a Federal judge ruled. There is no evidence that the T-shirt created any disturbance or disruption", the judge said in the ruling released by the American Civil Liberties Union of Michigan, which sued the Dearborn school district on behalf of Bretton Barber.

An assistant principal had ordered Barber in February to conceal the anti-Bush Message or go home. Dearborn High School said it worried about inflamming passions at the suburban Detro, where a majority of students are Arab-American.

## Housemaid dies

On1.10.2003 a twenty year old maid servant working in the house of the Karnataka High Court Judge of the Karnataka High Court Judge Mr. Justice Chandrashekaraiah committed suicide by hanging at his residence. The deceased, Kamakshi, took this extreme step when the members of the family were asleep. She was brought up in the Judge's house since she was young and she used to do all the household work.

## Kolar Diary

☐ On 5.9.2003 Mr. M.S. Manjunath, Advocate, Kolar, married Ms. S.R. Nagamani at Kolar.

☐ On 30.9.2003 annual meeting of the Kolar District Advocates Co-operative Society, was held at Kolar Bar Association building under the presidentship of Mr. K.V. Shankarappa.

☐ On 30.10.2003 Mr. S.V. Ramdas, Advocate, Kolar, married Ms. R. Chandrika at Kolar.

☐ On 28.9.2003 Mr. N. Manjunatha, Advocate, Kolar, married Ms. R. Madhura at Bangalore.

## Foreign Tours

☐ During the first week of October 2003 Mr. K. Suresh, Advocate, with his family returned to Bangalore after 10 days tour of Malaysia and Thailand.

☐ During the first week of October 2003 Mr. R. N. Narasimha Murthy, Senior Advocate, Mr. N. K. Srinivasa Murthy, Mr. K. P. Kumar and Mr. Nanjunda Reddy, Advocate, returned to Bangalore after a fortnight tour of Turkey, Greece and Egypt.

## Letter to the Editor

Mr. S. K. Nahar, Advocate and President of the Karnataka Tax Consultants Association, Bangalore has endorsed a copy of the letter to *Communique* dated 13.10.2003 addressed to the President, Advocates Association Bangalore protesting against denial of voting in election held to the office bearers of the Association on 11.10.2003 inspite of his being a life member of the Association which he presented before elections officials who in turn issued identity slip No. 4483. He has also stated that he has been a life member of the Association since 1964 and for the first time he has been prevented from exercising his right to vote. He has desired that the matter may be placed before a special general body meeting to find a solution to the problem.

## National Judicial Commission

**K. B. Mohandas**, Chairman, Bar Council of Kerala

*From last issue*

In the second judge's case reported in AIR 1994 Supreme Court page-342, the Supreme Court wrested the power of appointment of members of High Courts and Supreme Courts from the executive altogether, based on a transcendental theory of judicial institutional independence. The Supreme Court held that only judges are the best judges, to appoint the judges without even sharing the power with the President.

The theory that earlier the judiciary did not have any say in making appointments to judiciary is not correct. The responsible executive always sought for their help. A study was conducted in 1993 with reference to the appointments made to the High Court of Kerala. It was found that people from leading advocates' office alone came to be appointed. This was only because of the influence of the sitting judges. It was on their suggestion/recommendation that the names were sent to the President for making appointments. The present system of selection of Judges by collegium of Senior Judges has proved in many instances that personal preferences weighed to quality in the matter of appointment of Judges. This is really unfortunate. Our judges according to themselves are accountable to the public. If they are to be accountable to the public, it should be through the legislature or the executive. It is this position, which has been accepted in USA and UK. Our Judges do not seem to tolerate criticisms, nor do they indicate the benefit derived from criticisms. There is no obligation on their part to respond to criticisms of their judgments. This is a very negative attitude.

It was in this background, there arose widespread opinion that judicial appointments are far ttoo paramount to be left to the judges themselves, and that a National Judicial Commission shall be constituted. We the Bar Council of Kerala whole-heartedly welcome the proposal for constitution of a National Judicial Commission. The recent national commission to review the working of the constitution has suggested "a National Judicial Commission with the composition of the collegiums which gives due importance to, and provides for, effective participation of both the executive and the judicial wings of the State as an integrated scheme for the machinery of appointments of Judges". The recommendation of the commission to review working of the constitution was that the National Judicial Commission for appointment of judges of Supreme Court shall comprise of :

1. **The Chief Justice of India - Chairman**
2. **Two senior-most judges of the Supreme Court - Members**
3. **The Union Minister for Law and Justice - Member**
4. **One eminent person nominated by the President after consultation with the Chief Justice of India - Member**

It is as per the recommendations of the national commission to review the working of the constitution, The Constitution (Ninety-Eighth Amendment) Bill, 2003 (Bill N o. 41 of 2003) is proposed to be introduced in the Parliament. As per the proposed amendment to Art. 124 of the constitution, the President can appoint a judge to the Supreme Court and the high court only on the recommendation of the National Judicial commission. In the Amendment Bill a new chapter viz "chapter IV A-National Judicial Commission" is introduced by adding Article 147A in the constitution detailing the composition of the national judicial commission.

Looking into art. 147-A (2( (d), the Constitution of the Commission appears to have given prominence to the Judiciary by including the Chief Justice and two Judges of the Supreme Court next to the Chief Justice in seniority, in a five member commission. The executive may be able to tilt the balance in their favor, if either of the two senior most judges agree with the Govenment stand, represented by the Law Minister and the nominee of the President, made in consultation with the Prime Minister. This possibility or eventuality may lead to a situation of the Government sponsoring the junior among the two judges for high offices as a motivation or reward for siding with the Government in the matter of appointments to the higher judiciary. This eventually could be avoided if the nominee of the President could be a totally independent, eminent man known for his integrity nominated solely by the President in exercise of the prerogative of his high office.

*(to be continued)*

## Artist of the year



The Bangalore Gayana Samaja felicitated renowned singer Shimoga Subbanna in a function held on 19th October 2003 at Bangalore. Considering his contribution to Sugam-Sangeeth he was conferred with a title 'Artist of the year'.

## Unique achievement

Mr. D. N. Ujjankop, Advocate, Belgaum, life member of the Indian Law Institute, New Delhi and Lahari Advocates Forum had the distinction of attending the Human Rights study session held at Chulalangkom University, Bangkok, Thailand from 5.10.2003 to 25.10.2003. There were 29 participants in the study session representing different countries. On the successful completion of the study session the Thailand government has sponsored Mr. Ujjankop to attend an advance course in Mahidol University, Bangkok from 1.3.2004 to 15.3.2004 by granting scholorship Lahari Advocate Forum congratulates Mr. Ujjankop for this achievement.

## Editor's Choice

Mr. Aditya Sondhi, Advocate, has written a book 'unfinished symphony' on his Almá Mater Bishop cotton Boys' school, Bangalore. Foreword of the book has been written by Dr. Raja Ramanna and it is published by Penguin Books India (P) Ltd and priced Rs. 250. The book with 187 pages plus xii makes an interesting reading. Those who are interested in history, profiles of men in public domain and particularly the old cottonians' may be more interested in reading the book.

**Read Communique.**

## Lahari Advocates Forum

On 31.10.2003 Lahari Advocates Forum had organised a family get-together at Hotel Ashraya International, Bangalore. More than 100 persons participated.

## Miscellany

☐ Ms. B.J.G. Sathyashri, Advocate, was secured first prize in fancy dress competition (senior) conducted by Hitaishi Mahila Mandali (R) on 20.10.2003 at Canara Union, Bangalore.

☐ With effect from 27.10.2003 M/s. Shanmugha Sampige, K.P. Thrimuthy and G. Sathyanarayana, Advocates shifted their chamber from No. 618, Rajeswari Market, Avenue Road, Bangalore-2 to No.186/4 J.C. Complex, G.F.3, Sirurpark Road, Near Nataraja Theatre, Sheshadripuram, Bangalore-20.

## Wedding

We are glad to report that

☐ On 07.09.2003 Mr. Chandan S. Rao, Advocate, married Ms. Shree at Bangalore.

☐ On 19.10.2003 Mr. B.S. Rajashekar, Advocate, married Ms. K. Shreepadma at Bangalore.

## Obituary

We regret to report that :

☐ On 3.9.2003 M.G. Ramaiya, Former District Judge, passed away at Bangalore.

☐ On 3.10.2003 Justice D.M. Chandrashekar (83) passed away at Bangalore. He was the Former Chief Justice of Allahabad High Court as well as Karnataka High Court.

☐ On 30.10.2003 C. B. Motaiah, Advocate and Professor of Law, passed away at Bangalore.

## Lawyer wins Nobel

In the first week of October Iranian Lawyer Ms. Shirin Ebadi won the Nobel peace Prize for her work defending human rights in an award aimed at inspiring democratic reform across the Muslim world. "She sees no contradiction between Isam and fundamental rights", Nobel Committee observed.

## Legal Precedents

☐ **Consumer Forum can execute its order, same need not be sent for execution to civil courts. AIR 2003 S.C.1043 (From Karnataka)**

**V.N. KHARE, C.J.I., K.G. BALAKRISHNAN AND S.B. SINHA JJ**

State of Karnataka, Appellant V/s Vishwabarathi House Building Co-operative Society and others.

Constitution of India Art-246, Consumer Protection Act 1986 S.3-power of Parliament to enact law-Consumer Protection Act enacted by parliament within legislative competence of Parliament-Act is constitutionally valid.

Constitution of India, Arts 323-A, 323-B and 246, Consumer Protection Act (68 of 1986)-s.9-Consumer Redressal Fora-creation of i.e. Dist forum, State commission and National commission by Parliament under consumer protection Act-Valid in absence of suitable amendment in Constitution in terms of Art.386.

Consumer protection Act, 1986-S.3, Civil P.C. (5 of 1908) S.9 Consumer redressal Fora-Established under consumer protection Act-does not strike at independence of judiciary-said Act supplements the jurisdiction of the civil courts or other statutory authorities.

Consumer protection Act, 1986-Secs. 23 and 3-transfer of case from one consumer court to another-Act does not provide for same-Nor does Act makes provision to grant injunction-Absence of such provisions do not render Act ultravires the Constitution or unworkable-since interests of parties are safeguarded qua a remedy to approach civil court for seeking injunction.

Consumer Protection Act, 1986 S.25-Enforcement of Orders by District forum/State/National commission-Deemed to be decree or order made by civil court-same can be executed by forum or commission and it need not be sent to civil court for execution thereof.

☐ **ILR 2003 KAR 1785**

**Y.K. SABHARWAL AND H.K. SEMA JJ**

**B.S. Joshi and others V/s State of Haryana and another**

CrPC-Sec 320 and 482, Constitution of India Articles 226 & 227 Sec.-IPC-498 A/323 and 406-Inherent powers of H.C. to quash criminal proceedings-Scope and ambit of, in relation to matrimonial disputes-Both parties to a matrimonial dispute approached H.C. & filed petition jointly praying for quashing of FIR earlier filed by wife under Sec. 498 A and 406 IPC-H.C. Held that offences under section 498 A and 406 IPC are non compoundable and inherent powers under Sec 482 of CrPC cannot be invoked to by pass the mandatory provision of Sec. 320 of CrPC whether it was permissible for the H.C. to quash the FIR allowing the appeal held.

☐ **2003 AIR SCW 934**

**S. RAJENDRA BABU AND ASHOKBHAN J.J.**

Subhashis Bakshi and others V/s West Bengal Medical council and others. Right to practice Medicine-Diploma holder in community medical service can practice medicine. They can prescribe medicines and issue sickness or death certificates.

Medical Council of India V/s State of Rajasthan, 1996 AIR SCW 2492 Impliedly overruled.

☐ **2003 AIR SCW 1950**

**FROM V.N. KHARE CJI-S.B. SINHA AND A.R. LAKSHMANAN J.J.**

Matrimonial Proceedings-Medical examination of party can be ordered by court either suo moto or at instance of party, such direction does not offend right of privacy.

**Sharada V/s Dharmpal**

Hindu Marriage Act, 1955 Ss 5,12 (1) (b) and 13 (1)(3) Civil Proceedure Code, 1908 Sec 151, Order 32 R15, Lunacy Act 1912-S.41 (Since repealed) Divorce proceedings-case of mental illness-Medical examination of party-Constitution of India Art 21-Privacy Right is not absolute.

☐ **AIR 2003 S.C. 638**

**M.B. SHAH AND D.M. DHARMADHIKARI J.J.**

**Sunderbhai ambalal Desai, V/s State of Gujarat with C.M. Mudaliar V/s State of Gujarat**

Criminal procedure code (2 of 1974) S.451-Disposal of proceding pending trial-powers of court-powers under S.451 should be exercised expeditiously and judiciously-court to pass appropriate orders immediately and articles are not to be kept for a long time at police station in any case for not more than 15 days to one month-procedure for disposal of seized valuable articles and currency notes, vehicles, seized liquor and Narcotic drugs suggested.

*Contributed by : A.D. Ramanan lal, Advocate*

Published by : Lahari Advocates Forum, No. 2980, "Laxmideep", 17th Cross, K. R. Road, BSK II Stage, Bangalore-560 070 and
Printed at : Parimala Mudranalaya, Mount Joy Extension, Hanumanthanagar, Bangalore-560 019. Phone : 6525516. Editor : K. Suryanarayana Rao

ಲಹರಿ ಸಂವಾದ

ಸಂಪುಟ ೪ ಶಕೆ : ಸ್ವಭಾನು ಸಂವತ್ಸರ, ಮಾಸ : ಆಶ್ವಯುಜ–ಕಾರ್ತಿಕ ಸಂಚಿಕೆ ೭

## ಸದ್ದುಗದ್ದಲವಿಲ್ಲದ ಸಮಾಜಸೇವೆ



ಕೇವಲ ಬದುಕಿದರಷ್ಟೇ ಸಾಲದು, ಬದುಕಿನಲ್ಲೊಂದು ಅರ್ಥವನ್ನು ಕಂಡುಕೊಳ್ಳಬೇಕು. ಸ್ವಾರ್ಥವನ್ನು ಬಿಡಲಾಗದಿದ್ದರೂ, ಸ್ವಾರ್ಥದ ಜೊತೆಗೆ ಸಾಧ್ಯವಾದಷ್ಟು ಪರಾರ್ಥವನ್ನೂ ಸಾಧಿಸಿದಾಗಲೇ ಮನುಷ್ಯನ ಜೀವನ ಸಾರ್ಥಕ ಎಂದು ತಿಳಿದವರು ಹೇಳುವುದು. ಅದೆಷ್ಟೇ ಡೌಲಿನಿಂದ ಮನುಷ್ಯ ಬದುಕಿದರೂ, ಕಿಂಚಿತ್ತೂ ಪರಾರ್ಥ ವಿಲ್ಲದೆ ಹೋದವನಿಗೆ, ನಮ್ಮ ಉತ್ತರ ಕರ್ನಾಟಕದ ಮಂದಿ ಹೇಳುವಂತೆ "ಫುಕಟ್ ಹೋತು ಜನ್ಮ ಅವನ್ದು" ಅಂತ ನಾವೂ ಹೇಳಬಹುದು.

ದಾನ, ಧರ್ಮ, ಪರೋಪಕಾರವನ್ನು ಮಾಡುವ ಗುಣ ಕೆಲವರಿಗೆ ಹಿರಿಯರಿಂದಲೇ ರಕ್ತಗತವಾಗಿ ಬಂದಿರುತ್ತದೆ. ಇಂತಹ ಸಮಾಜಸೇವೆ, ಧಾರ್ಮಿಕ ಸೇವೆಗಳು ಆರೋಗ್ಯಕರ ಸಮಾಜಕ್ಕೆ ಬುನಾದಿಯಂತೆ ಕೆಲಸ ಮಾಡುತ್ತವೆ. ಸಮಾಜಸೇವೆಗೂ, ವಕೀಲಿ ವೃತ್ತಿಗೂ ಇರುವ ಬಾದರಾಯಣ ಸಂಬಂಧವನ್ನು ಯಾರೂ ಅಲ್ಲಗಳೆಯಲಾರರು. ಈ ದಿಶೆಯಲ್ಲಿ ಎಲೆಮರೆಯ ಕಾಯಿಯಂತೆ ಕಳೆದೊಂದು ದಶಕದಿಂದ ಕೆಲಸ ಮಾಡುತ್ತ ಬಂದವರು, ವಕೀಲ ಬಾಂಧವರೇ ಆದ ಎನ್. ತಿಮ್ಮಪ್ಪ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಇವರು ಮಾಡಿದ ಸಮಾಜಸೇವೆ ಇಂತಿದೆ :

೧. ಬೆಂಗಳೂರು ಗ್ರಾಮಾಂತರ ಹಾಗೂ ನಗರ ಜಿಲ್ಲೆಯಲ್ಲಿ ಇದುವರೆ ವಿಗೆ ಆರ್ಥಿಕವಾಗಿ ಹಿಂದುಳಿದ ೮೬೦ ಮಂದಿ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ತಲಾ ಒಂದು ಸಾವಿರ ರೂ.ಗಳಂತೆ ವಿದ್ಯಾರ್ಥಿವೇತನ ಹಾಗೂ ಪ್ರತಿಭಾ ಪುರಸ್ಕಾರ ನೀಡಿಕೆ.

೨. ತಿಮ್ಮಪ್ಪ ಸಾಮಾಜಿಕ ಸಾಂಸ್ಕೃತಿಕ ದತ್ತಿವಿದ್ಯಾಸಂಸ್ಥೆಯ ವತಿಯಿಂದ ೨೦೦೨ನೇ ಇಸವಿಯಲ್ಲಿ ಎರಡು ಸಾವಿರ ವಿದ್ಯಾರ್ಥಿಗಳಿಗೆ ಮತ್ತು ೨೦೦೩ ಇಸವಿಯಲ್ಲಿ ಆರು ನೂರು ಮಂದಿಗೆ ಉಚಿತ ಪಠ್ಯಪುಸ್ತಕ ಮತ್ತು ನೋಟ್‌ಬುಕ್ಕುಗಳ ವಿತರಣೆ.

೩. ೨೦೦೨ನೇ ವರ್ಷದಲ್ಲಿ ಹತ್ತು ಮಂದಿ ಪ್ರತಿಭಾವಂತ ವಿದ್ಯಾರ್ಥಿ ಗಳನ್ನು ದತ್ತು ತೆಗೆದುಕೊಂಡು ತಲಾ ೫೦೦ ರೂ.ಗಳ ವಿದ್ಯಾರ್ಥಿ ವೇತನ ನೀಡಿಕೆ.

೪. ಅಂತರ್ಜಾತಿ ವಿವಾಹಗಳೂ ಸೇರಿದಂತೆ ಮೂವತ್ತೊಂದು ಮದುವೆ ಗಳನ್ನು ನಡೆಸಿಕೊಡಲಾಗಿದೆ.

೫. ಗ್ರಾಮೀಣ ಪ್ರದೇಶದಲ್ಲಿ ನಾಲ್ಕು ಸಲ ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸಲಾಗಿದೆ.

೬. ಐವತ್ತುಮಂದಿ ಅಂಗವಿಕಲರಿಗೆ ಸಾಧನ ಸಲಕರಣೆಗಳನ್ನು ಒದಗಿಸ ಲಾಗಿದೆ. ನಂದಾದೀಡ ಮತ್ತು ಶ್ರೀ ವಿನಾಯಕ ಅಂಗವಿಕಲರ ಸೇವಾಸಂಸ್ಥೆಗಳು ಈ ಪ್ರಯೋಜನ ಪಡೆದಿವೆ.

೭. ದಾಸರಹಳ್ಳಿ ಮತ್ತು ಅಬ್ಬಿಗೆರೆಯ ಮಹಿಳಾ ಸಂಘಗಳಿಗೆ ತಲಾ ಎರಡು ಹೊಲಿಗೆ ಯಂತ್ರಗಳನ್ನು ನೀಡಲಾಗಿದೆ. ಟ್ರಸ್ಟ್‌ನ ವಾರ್ಷಿಕ ಬಜೆಟ್ ಎರಡು ಲಕ್ಷ ಮೀರುತ್ತದೆ. ಇವಲ್ಲದೆ, ಅಂಧ ಮಕ್ಕಳ ಶಾಲೆ, ಹೊಲಿಗೆ ತರಬೇತಿ ಕೇಂದ್ರ ಹಾಗೂ ವೃದ್ಧಾಶ್ರಮಗಳು ತಮ್ಮ ಟ್ರಸ್ಟ್ ವತಿಯಿಂದ ಶೀಘ್ರವೇ ಕಾರ್ಯಾರಂಭ ಮಾಡಲಿದೆ ಎಂದು ತಿಮ್ಮಪ್ಪ ತಿಳಿಸುತ್ತಾರೆ.

ನರ್ಮದಾ ಬೇಸಿನ್ ಗ್ರಾಮಾಭಿವೃದ್ಧಿ ಸಂಸ್ಥೆ, ಹರಿ ಓಂ ಚಾರಿಟಬಲ್ ಟ್ರಸ್ಟ್ ಮುಂತಾದ ಹಲವು ಹತ್ತುಸಂಸ್ಥೆಗಳಿಗೆ ಕಾನೂನು

(೨ನೇ ಪುಟ ನೋಡಿ)

## ಬಿ.ವೆಂ.ಪು.ರವರ "ಅಮ್ಮ–ಡ್ರಮ್ಮು" ಕವನಸಂಕಲನ ಬಿಡುಗಡೆ

ದಿನಾಂಕ ೧೮.೧೦.೨೦೦೩ರಂದು ಮಧ್ಯಾಹ್ನ ೨ ಗಂಟೆಯ ಸಮಯದಲ್ಲಿ ನಗರದ ದಂಡಾಧಿಕಾರಿಗಳ ನ್ಯಾಯಾಲಯದ ಆವರಣದಲ್ಲಿನ ವಕೀಲರ ಸಂಘದ ಸಭಾಂಗಣದಲ್ಲಿ ಹಿರಿಯ ವಕೀಲರಾದ ಬಿವೆಂಪು (ಬಿ.ವಿ. ಪುಟ್ಟೇಗೌಡ)ರವರ ಅಮ್ಮ–ಡ್ರಮ್ಮು ಕವನಸಂಕಲನ ಪುಸ್ತಕ ಬಿಡುಗಡೆ ಸಮಾರಂಭವನ್ನು ಸಂಘಕ್ಕೆ ನೂತನವಾಗಿ ಆಯ್ಕೆಯಾಗಿರುವ ಅಧ್ಯಕ್ಷರಾದ ಶ್ರೀ ಡಿ.ಎಲ್. ಜಗದೀಶ್‌ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಮಾರಂಭಕ್ಕೆ ಅತಿಥಿಗಳಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಪಾಟೀಲರು ಉ||ನ್ಯಾ||ನ್ಯಾ|| ಶ್ರೀ ಬಿಲ್ಲಪ್ಪನವರು, ಮುಖ್ಯ ಧಂಡಾಧಿಕಾರಿಗಳು, ಇತರ ಧಂಡಾಧಿಕಾರಿಗಳು, ಹಿರಿಯ ವಕೀಲರಾದ ಬಸವರಾಜರಾಯರೆಡ್ಡಿ ನೂತನವಾಗಿ ಸಂಘಕ್ಕೆ ಆಯ್ಕೆಯಾದ ಎಲ್ಲಾ ಪದಾಧಿಕಾರಿಗಳು ಕಾ.ಕಾ. ಸಮಿತಿ ಸದಸ್ಯರುಗಳು ಇತರ ಹಿರಿಯರು ಉಪಸ್ಥಿತರಿದ್ದರು.

ಹಿರಿಯ ವಕೀಲರಾದ ಶ್ರೀ ಧನರಾಜ್‌ರವರು ಭಗವದ್ಗೀತೆಯ ೧೮ನೇ ಅಧ್ಯಾಯದ ಹಲವು ಭಾಗಗಳ ಶ್ಲೋಕಗಳನ್ನು ಸ್ತುತಿಸುವುದ ರೊಂದಿಗೆ ಸಭೆ ಆರಂಭಗೊಂಡಿತು. ವಿಭಾಗದ ಸಂಘದ ಕಾ.ಕಾ. ಸಮಿತಿ ಸದಸ್ಯರಾದ ಲಿಂಗೇಗೌಡರವರು ವೇದಿಕೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಹಿರಿಯರಿಗೂ ಸ್ವಾಗತ ಕೋರಿದರು.

ಕ|| ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಶ್ರೀ ಬಿಲ್ಲಪ್ಪನವರು ಅಮೃತಹಸ್ತದಿಂದ 'ಅಮ್ಮ–ಡ್ರಮ್ಮು' ಕವನ ಸಂಕಲನ ವನ್ನು ಬಿಡುಗಡೆ ಮಾಡಿದರು. ನಂತರ ಶ್ರೀ ದಿವಾಕರ ಮದ್ದೂರ್‌ರವರು ಬಿವೆಂಪುರವರ ಈ ಕೃತಿಯಲ್ಲಿನ ಕೆಲವು ಆಯ್ದ ಕವನಗಳನ್ನು ತಮ್ಮದೇ ಆದ ಮಧುರ ಧಾಟಿಯಲ್ಲಿ ರಾಗ ಸಂಯೋಜಿಸಿ ಇಂಪಾಗಿ ಹಾಡಿದರು. ಅವುಗಳಲ್ಲಿ 'ಮೊಳಗಲಿ, ಕ್ರಾಂತಿ ಮೊಳಗಲಿ', 'ದೇಹ ದೇಗುಲ' ಮತ್ತು 'ಕವಿಯಲ್ಲ ನಾನು' ಮುಂತಾದವುಗಳನ್ನು ಶ್ರೀ ಮದ್ದೂರುರವರು ಭಾವ ತುಂಬಿ ಹಾಡಿದರು.

ಶ್ರೀ ಚಂದ್ರಶೇಖರ ಪಾಟೀಲ (ಚಂಪಾ)ರವರು ಮಾತನಾಡುತ್ತ ಕೃತಿಯ ಬಗ್ಗೆ, ಅದರ ಕರ್ತೃ ಬಿವೆಂಪುರವರ ಬಗ್ಗೆ ವಿವರವಾಗಿ ಮಾತನಾಡಿ ಮೆಚ್ಚುಗೆ ವ್ಯಕ್ತಪಡಿಸಿದರು. ಕೃತಿಯ ಬಗ್ಗೆ ವಿಶ್ಲೇಷಿಸುತ್ತಾ, ಭಾವನಾತ್ಮಕ ಸಂಬಂಧ, ಬಂಧು–ಬಳಗ, ಬಸವಣ್ಣನವರ ಬಗ್ಗೆ, ಗೌತಮಬುದ್ಧರ ಬಗ್ಗೆ ಮತ್ತು ಅವರ ವಿಚಾರಗಳನ್ನು ಸ್ಮರಿಸಿ ಕೃತಿಯ ಮುನ್ನುಡಿಯ ಬಗ್ಗೆ, ಕೃತಿ ಬರೆಯುವಾಗ ಕವಿಯ ಮನಸ್ಸಿನಲ್ಲಿ ಆಗುವ ವಿಚಾರಮಂಥನದ ಬಗ್ಗೆ ವಿಚಾರ ಮಾಡಿ ಇದರಿಂದ ಹೊರಬಂದಿರುವ ಸಾಹಿತ್ಯ ವಿಶೇಷತೆ ಮತ್ತು ಶೈಲಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಈ ಕೃತಿಗೆ ಶೀರ್ಷಿಕೆ ಇಟ್ಟಿರುವ ಬಗ್ಗೆ ಯಾವುದೇ ಕೃತಿಯ ಶೀರ್ಷಿಕೆ ಒಬ್ಬ ವ್ಯಕ್ತಿಯ ಶಾರೀರಿಕ ರೂಪುರೇಖೆಗಳನ್ನು ಮತ್ತು ಆಕಾರವನ್ನು ಹೋಲಿಕೆಗೆ ಜೋಡಿಸುವುದು ಸಮಂಜಸವಲ್ಲವೆಂದು ತಮ್ಮ ಅಭಿಪ್ರಾಯ ಮಂಡಿಸಿದರು.

ಉ|| ನ್ಯಾ|| ನ್ಯಾಯಮೂರ್ತಿಗಳಾದ ಶ್ರೀ ಬಿಲ್ಲಪ್ಪನವರು ಮಾತನಾಡುತ್ತಾ ಸಾಹಿತ್ಯಕ್ಕೆ ಆಯುಃಪ್ರಮಾಣವಿಲ್ಲ. ಕವಿ ಕಲ್ಪನೆಯ ಶೈಲಿಯ ಮೂಸೆಯಲ್ಲಿ ಮಂಥನಗೊಂಡು ಜೀವ ತುಂಬಿ, ಭಾವನಾತ್ಮಕ ವಾಗಿ ಸಮಾಜದ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಿದಂತಹ ಸಾಹಿತ್ಯ ಸರ್ವಕಾಲೀನ, ಸರ್ವಮನುಕುಲದ ಸಾಮಾಜಿಕ ನೋವು ನಲಿವುಗಳ ಪ್ರತಿರೂಪವಾಗಿ ಸದಾ ಜನರ ಮನದಲ್ಲಿ ಉಳಿಯುತ್ತದೆ. ಅಂತಹ ಕೃತಿಗಳನ್ನು ಸಮಾಜದ ಜನರೇ ಶತಶತಮಾನಗಳ ಕಾಲ ಪಠಿಸಿ, ಪೋಷಿಸಿ, ಬೆಳೆಸಿ ಸದಾ ಜೀವಂತ ಆಸ್ತಿಯಾಗಿರುವಂತೆ ಮಾಡುತ್ತಾರೆ. ಕಾಲ ಬದಲಾದರೂ ಆ ಸಾಹಿತ್ಯಶೈಲಿಯನ್ನು ತನ್ನ ಕಾಲದ ಆಗುಹೋಗು ಗಳ ಘಟನೆಗಳೊಂದಿಗೆ ಹೋಲಿಸಿಕೊಂಡು ಅವುಗಳನ್ನು ಜೀವಂತ ಗೊಳಿಸಿ ತಾವು ಆನಂದ ಪಡುತ್ತಾರೆ. ಅಂತಹ ಜೀವ ಹಾಗೂ ಭಾವ ತುಂಬಿದ ಸರ್ವರಿಗೂ ಸಾಮರಸ್ಯ ಮೂಡಿಸುವ ಸಾಹಿತ್ಯ ಹೊರಬರ ಬೇಕೆಂದು ಆಶಿಸಿದರು. ಅವುಗಳಿಗೆ ಉದಾಹರಣೆಯಾಗಿ ರಾಮಾಯಣ, ಮಹಾಭಾರತ, ಶಾಕುಂತಲ ನಾಟಕಂ ಮುಂತಾದವುಗಳಲ್ಲಿ ಅಡಕ ಗೊಂಡಿರುವ ಹಲವಾರು ಘಟನೆಗಳನ್ನು ಇಂದಿನ ಕಾಲದ ಸಮಾಜದ ವಿಚಾರಗಳಿಗೆ ಹೋಲಿಸಿ, ಶತಮಾನದ ಹಿಂದಿನ ಶ್ರೀ ವಿವೇಕಾನಂದರ ಚಿಕಾಗೋದಲ್ಲಿಯ ಭಾಷಣ, ಅದರ ಮಹತ್ವ ಮುಂತಾದವುಗಳ ಬಗ್ಗೆ ಸವಿಸ್ತಾರವಾಗಿ ಮಾತನಾಡಿ, ಕೃತಿಯ ಬಗ್ಗೆ ಲೇಖಕರ ಬಗ್ಗೆ ಅವರ ಜಾನಪದ ಶೈಲಿಯ ಬಗ್ಗೆ ಮಾತನಾಡುತ್ತ ಸರ್ವಕಾಲವೂ ಜಾನಪದ ಸಾಹಿತ್ಯ ಜೀವಂತವಾಗಿರುವ ಮಹತ್ವ ವಿವರಿಸಿ ಜಾನಪದ ಹಾಡನ್ನೂ ಹಾಡಿ ತಮ್ಮ ಸಾಹಿತ್ಯಪ್ರೇಮವನ್ನು ವ್ಯಕ್ತಪಡಿಸುತ್ತಾ ಕೃತಿಯ ಶೀರ್ಷಿಕೆಯ ಬಗ್ಗೆ ಚಂಪಾರವರ ಅಭಿಪ್ರಾಯವನ್ನು ಅನುಮೋದಿಸಿದರು.

ಕವನ ಸಂಕಲನದ ಕರ್ತೃ ಮತ್ತು ಸಾಹಿತಿಗಳಾದ ಶ್ರೀ ಬಿವೆಂಪು ರವರು ಮಾತನಾಡುತ್ತ ಈ ಕೃತಿ ಬಿಡುಗಡೆಗೊಳಿಸಲು ಸಹಕರಿಸಿದ ಎಲ್ಲರನ್ನು ವಂದಿಸುತ್ತಾ ಕೃತಿಗೆ ಶೀರ್ಷಿಕೆ ನಿಗದಿಪಡಿಸಿದ ಸಂದರ್ಭ, ಅವಶ್ಯಕತೆ, ಅನಿವಾರ್ಯತೆಯನ್ನು ವಿವರಿಸಿ ಈ ಕೃತಿಯ ಶೀರ್ಷಿಕೆ 'ಅಮ್ಮ–ಡ್ರಮ್ಮು' ಎಂದಿಟ್ಟಿರುವ ಬಗ್ಗೆ ಸಮರ್ಥಿಸಿಕೊಂಡರು.

ನಂತರ ಸಭೆಯ ಅಧ್ಯಕ್ಷ ಹಾಗೂ ಸಂಘದ ಅಧ್ಯಕ್ಷರಾದ ಶ್ರೀ ಡಿ. ಎಲ್. ಜಗದೀಶ್‌ರವರು ಮಾತನಾಡಿದರು. ಈ ವಿಭಾಗದ ಸಂಘದ ಕಾ.ಕಾ. ಸದಸ್ಯರಾದ ಶ್ರೀ ನಾಗಣ್ಣನವರು ವಂದನಾರ್ಪಣೆ ಮಾಡಿದರು. ಶ್ರೀ ಲಿಂಗೇಗೌಡರು ಸಭೆಯ ನಿರೂಪಣಾ ಕಾರ್ಯ ನಿರ್ವಹಿಸಿದರು.

**ವರದಿ : ಎಸ್. ಗೋಪಾಲ್**

## "ನಗೆಯು ಬರುತಿದೆ" ಪುಸ್ತಕ ಬಿಡುಗಡೆ ಸಮಾರಂಭ

ದಿನಾಂಕ ೧೧.೧೧.೨೦೦೩ ರಂದು ಮಧ್ಯಾಹ್ನ ೧.೪೫ ಗಂಟೆಗೆ ಬೆಂಗಳೂರು ವಕೀಲರ ಸಂಘದ ಆಶ್ರಯದಲ್ಲಿ ಹಾಗೂ ವಕೀಲರ ಭವನದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಡಿ.ಎಲ್. ಜಗದೀಶ್‌ರವರ ಅಧ್ಯಕ್ಷತೆಯಲ್ಲಿ ಹಿರಿಯ ನ್ಯಾಯವಾದಿಗಳಾದ ಶ್ರೀ ಹಾ.ರಾ. ಶಂಕರನಾರಾಯಣ್‌ರವರ "ನಗೆಯು ಬರುತಿದೆ" ಪುಸ್ತಕ ಬಿಡುಗಡೆ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕ|| ಉ|| ನ್ಯಾ|| ನ್ಯಾಯಮೂರ್ತಿಗಳಾದ ಶ್ರೀ ಕೆ.ಎಲ್. ಮಂಜುನಾಥ್‌ರವರು, ಶ್ರೀ ವಿಶ್ವೇಶ್ವರಭಟ್, ಸಂಪಾದಕರು, ವಿಜಯಕರ್ನಾಟಕ ಪತ್ರಿಕೆ ಮತ್ತು ಶ್ರೀ ಎಸ್. ದಿವಾಕರ್, ಖ್ಯಾತ ಕತೆಗಾರರು ಮತ್ತು ವಿಮರ್ಶಕರು ಇವರೊಂದಿಗೆ ಸಂಘದ ಇತರ ಪದಾಧಿಕಾರಿಗಳು ವೇದಿಕೆಯಲ್ಲಿ ಆಸೀನರಾಗಿದ್ದರು.

ಬಿ.ಪಿ. ರಾಧರವರ ಪ್ರಾರ್ಥನೆಯೊಂದಿಗೆ ಆರಂಭಗೊಂಡ ಸಭೆಯಲ್ಲಿ ಸಂಘದ ಕಾರ್ಯದರ್ಶಿಯವರಾದ ಶ್ರೀ ಸಿ. ಆರ್. ಗೋಪಾಲಸ್ವಾಮಿರವರು ಸಭೆಗೆ ಅತಿಥಿಗಳನ್ನು ಪರಿಚಯಿಸಿ, ಅವರಿಗೆ ಪುಷ್ಪಮಾಲೆ ಹಾಕುವುದರೊಂದಿಗೆ ಸ್ವಾಗತ ಕೋರಿದರು.

ನ್ಯಾ|| ಶ್ರೀ ಕೆ.ಎಲ್. ಮಂಜುನಾಥ್‌ರವರು ತಮ್ಮ ಅಮೃತಹಸ್ತದಿಂದ ಹಾ.ರಾ. ವಿರಚಿತ 'ನಗೆಯು ಬರುತಿದೆ' ಪುಸ್ತಕ ಬಿಡುಗಡೆಗೊಳಿಸಿ ಮಾತನಾಡುತ್ತಾ ಈ ಹಿಂದೆ ಇವರದೇ ಇನ್ನೊಂದು ಪುಸ್ತಕವನ್ನು ಸಂಘದ ಅಧ್ಯಕ್ಷನಾಗಿ ಬಿಡುಗಡೆಗೊಳಿಸಿದೆ ಅದು ಸಂಪೂರ್ಣ ಮಾರಾಟವಾಗುವುದರೊಂದಿಗೆ ಯಶಸ್ಸನ್ನು ಹಾ.ರಾ.ರವರಿಗೆ ತಂದುಕೊಟ್ಟಿತ್ತು. ಹಾಗೆಯೇ ಈ ಪುಸ್ತಕವೂ ಹೆಚ್ಚು ಮಾರಾಟಗೊಂಡು, ಓದುಗರ ಮನಸೆಳೆದು ಹಾ.ರಾ.ರವರಿಗೆ ಯಶಸ್ಸನ್ನು ತಂದುಕೊಡಲಿ ಎಂದು ಹಾರೈಸುತ್ತಾ ತಮ್ಮ ಮತ್ತು

(೨ನೇ ಪುಟ ನೋಡಿ)

ಹಾಗೂ ಆಡಳಿತಾತ್ಮಕ ಸಲಹೆಗಾರರೂ ಆಗಿದ್ದಾರೆ ಎನ್. ತಿಮ್ಮಪ್ಪ. ರಾಜ್ಯದ ಪ್ರಮುಖ ರಾಜಕೀಯ ಪಕ್ಷದಲ್ಲಿ ಸಂಘಟನಾಕಾರರಾಗಿ ದುಡಿಯುತ್ತಿರುವ ಇವರು ಕರ್ನಾಟಕ ಸಾದರ ವಿಕಾಸ ವೇದಿಕೆಯ ಅಧ್ಯಕ್ಷತೆ ಹಾಗೂ ಸಾದರು ವಾಣಿ ಪತ್ರಿಕೆಯ ಸಂಪಾದಕತ್ವವನ್ನು ನಿರ್ವಹಿಸುತ್ತಿದ್ದಾರೆ.

ತಮ್ಮ ವಕೀಲಿ ವೃತ್ತಿಯ ಜತೆಗೆ ಸಮಾಜಸೇವೆಯನ್ನು ಮಾಡುತ್ತಾ ಬಂದಿರುವ ತಿಮ್ಮಪ್ಪ ಫಲಾನುಭವಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲು, ಟ್ರಸ್ಟ್‌ನ ಕೆಲಸಗಳನ್ನು ನಡೆಸಲು ನಾಲ್ಕು ಮಂದಿ ಸಹಾಯಕರನ್ನು ಸಂಬಳ ನೀಡಿ ನೇಮಿಸಿಕೊಂಡಿದ್ದಾರೆ. ವಿದ್ಯಾರ್ಥಿಗಳಿಗೆ ನೆರವು ನೀಡುವ ಮೊದಲು ಸಂಬಂಧಿಸಿದ ಶಾಲೆಗಳ ಮುಖ್ಯರಿಂದ ಪ್ರಮಾಣಪತ್ರ/ ಶಿಫಾರಸ್ಸು ಪತ್ರಗಳನ್ನು ಪರಿಶೀಲಿಸಲಾಗುವುದು.

ತಮ್ಮ ಈ ಸಾಮಾಜಿಕ ಸೇವೆಗೆ ತಮ್ಮ ತಂದೆ ತಾಯಿಗಳೇ ಸ್ಫೂರ್ತಿ ಎನ್ನುವ ತಿಮ್ಮಪ್ಪನವರಿಗೆ ಟ್ರಸ್ಟ್ ಅಧ್ಯಕ್ಷೆ ಪತ್ನಿ ಪುಷ್ಪಾ, ಮೂವರು ಮಕ್ಕಳು ಹಾಗೂ ಅಸಂಖ್ಯಾತ ಸ್ನೇಹಿತರು ಬೆಂಬಲಿಗರಾಗಿ ನಿಂತಿದ್ದಾರೆ. ಹಲವಾರು ಸಂಘಸಂಸ್ಥೆಗಳು ತಿಮ್ಮಪ್ಪನವರನ್ನು ಸನ್ಮಾನಿಸಿವೆ.

ಪ್ರಾಮಾಣಿಕವಾಗಿ ಸಮಾಜಸೇವೆ ಮಾಡುವವರು ಅಪರೂಪವಾಗುತ್ತಿರುವ ಇಂತಹಾ ದಿನಗಳಲ್ಲಿ ಉದಾತ್ತ ಆದರ್ಶಗಳನ್ನು ಮೈಗೂಡಿಸಿಕೊಂಡು ಮುನ್ನಡೆದಿರುವ ತಿಮ್ಮಪ್ಪನವರಿಗೆ ಲಹರಿ ತನ್ನೆಲ್ಲ ಓದುಗರ ಪರವಾಗಿ ಶುಭ ಹಾರೈಸುತ್ತದೆ.

**ವಿ.ಸೂ. : ಆಸಕ್ತರು ಎನ್. ತಿಮ್ಮಪ್ಪನವರನ್ನು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : ೫೧೧೪೮೯೨೯, ೩೬೭೩೭೩೪೮೦**

**– *ಸೂತ್ರಧಾರ ರಾಮಯ್ಯ***

## ಶ್ರೀ ಅರವಿಂದರ ತತ್ವಬೋಧೆ

ನಮ್ಮ ಕಣ್ಣಿಗೆ ಕಾಣುವ ವಿಶ್ವ ಕೇವಲ ಅದರ ಮೇಲ್ನೋಟ. ಇದರ ಹಿಂಬದಿಯಲ್ಲಿ ಮಹಾನ್ ಸತ್ಯವೊಂದಿದೆ. ಈ ಸತ್ಯವು ಚೈತನ್ಯವೂ ಆಗಿದೆ. ಇದು ಅನಂತ ರೂಪಧಾರಿಣಿಯಾಗಿ ಎಲ್ಲ ವಸ್ತುಗಳಿಗೂ ಆತ್ಮವೇ ಆಗಿದೆ. ಇಂತು ಪ್ರಾಚೀನ ಋಷಿವರ್ಯರ ದರ್ಶನ. ಈ ದರ್ಶನವೇ ಶ್ರೀ ಅರವಿಂದ ದರ್ಶನದ ಓಂಕಾರವಾಗಿದೆ. ಜೀವಿಗಳೆಲ್ಲ ಆ ಪರಮಾತ್ಮನಲ್ಲಿ ಹಾಗೂ ಚೈತನ್ಯದಲ್ಲಿ ಅಡಕವಾಗಿದ್ದರೂ, ಪ್ರಜ್ಞೆಯ ವಿಂಗಡಣೆಯ ಮೂಲಕ ಹಾಗೂ ತಂತಮ್ಮ ಮನ–ಪ್ರಾಣ–ದೇಹಗಳಲ್ಲಿ ನೈಜ ಆತ್ಮದ, ಮಹಾನ್ ಸತ್ಯದ ಅರಿವು ಇಲ್ಲದವರಾದ್ದರಿಂದ, ಬೇರೆಬೇರೆಯಾಗಿದ್ದಾರೆ. ಒಂದು ಮಾನಸಯೋಗ ಪದ್ಧತಿಯಿಂದ ಈ ಬಿಡಿ ಪ್ರಜ್ಞೆಯ ಮೇಲ್ಪರದೆಯನ್ನು ಕಳಚುವುದು ಸಾಧ್ಯವಿದ್ದು, ನೈಜಸ್ವರೂಪವನ್ನೂ ಮತ್ತು ನಮ್ಮೊಳಗಿನ ಪ್ರಪಂಚದೊಳಗಿನ ದೈವತ್ವವನ್ನೂ ಅರಿತುಕೊಳ್ಳಬಹುದಾಗಿದೆ.

ಪರಮಸತ್ಯವಾದ ಈ ಚೈತನ್ಯವು ಜಡದಲ್ಲಿ ಹುದುಗಿಕೊಂಡಿದೆ. ಮುಂದೆ ಅದು ವಿಕಾಸಕ್ರಮದಲ್ಲಿ ಹಂತ ಹಂತವಾಗಿ ಮುಕ್ತವಾಗುತ್ತ ಸಾಗುತ್ತದೆ; ಚೇತನವೆಂದು ತೋರುವುದರಲ್ಲಿ ಕಾಣಿಸಿಕೊಂಡು ಬೆಳೆಯಲು ಸ್ವಯಂಪ್ರೇರಿತವಾಗುತ್ತದಲ್ಲದೆ, ಹೆಚ್ಚು–ಹೆಚ್ಚಿನ ಪೂರ್ಣತೆಯೆಡೆಗೆ ವಿಸ್ತಾರಗೊಳ್ಳುತ್ತ ನಡೆಯುತ್ತದೆ. ಚೈತನ್ಯದ ವಿಕಾಸದಲ್ಲಿ ಪ್ರಾಣವು ಮೊದಲನೆಯದಾದರೆ, ಮನಸ್ಸು ಎರಡನೆಯದು. ಆದರೆ, ವಿಕಾಸ ಗತಿ ಮನಸ್ಸತ್ವಕ್ಕೆ ಮುಗಿಯಲಿಲ್ಲ. ಅದು ಆಧ್ಯಾತ್ಮಿಕ ಹಾಗೂ ಅತಿ ಮಾನಸಿಕ ಚೈತನ್ಯದ ಅರಳುವಿಕೆಗಾಗಿ ಕಾಯುವುದು. ಪ್ರಜ್ಞಾವಂತ ಜೀವಿಯಲ್ಲಿ ಅತಿ ಮಾನಸ ಹಾಗೂ ಆತ್ಮವೇ ಪ್ರಧಾನಶಕ್ತಿಯಾಗಿರುವುದರಿಂದ ಅವುಗಳ ಬೆಳವಣಿಗೆಯೆಡೆಗೆ ವಿಕಾಸದ ಮುಂದಿನ ಹೆಜ್ಜೆ ಇರಲೇಬೇಕು, ಹೀಗಾದರೆ ಮಾತ್ರ ಹುದುಗಿಕೊಂಡಿದ್ದ ದೈವತ್ವವು ಬಿಡುಗಡೆ ಹೊಂದುತ್ತ ಜೀವನದಲ್ಲಿ ಪೂರ್ಣ ಪ್ರಕಟವಾಗಬಲ್ಲದು.

ಸಸ್ಯ ಹಾಗೂ ಪ್ರಾಣಿ ಜೀವನಗಳಲ್ಲಿ ಪ್ರಕೃತಿಯು ಪ್ರಜ್ಞಾಯುತ ಚಿತ್‌ಶಕ್ತಿಯ ಅಭಾವದಲ್ಲಿಯೇ ವಿಕಾಸಪಥದಲ್ಲಿ ಮುನ್ನಡೆದರೂ, ಅದು ಮಾನವನ ವಿಕಾಸ ಕ್ರಮದಲ್ಲಿ ಚೈತನ್ಯಯುಕ್ತ ಸಂಕಲ್ಪದಿಂದ ವಿಕಾಸವಾಗಬಲ್ಲದು. ಈ ಸಿದ್ಧಿ ಮಾನವನ ಮನಸ್ಸಂಕಲ್ಪದಿಂದಲೇ ಪೂರ್ಣವಾಗದು. ಯಾಕೆಂದರೆ, ಮನಸ್ಸು ಒಂದಿ ನಿರ್ದಿಷ್ಟ ಮಟ್ಟವನ್ನು ತಲುಪುವುದು ಮಾತ್ರ ಸಾಧ್ಯ. ಮುಂದೆ ಹೋಗಲಾರದೆ, ತನ್ನ ಪರಿಮಿತಿಯ ವೃತ್ತದಲ್ಲಿ ಮಾತ್ರ ಚಲಿಸಬಲ್ಲದು. ಒಂದು ರೀತಿಯ ರೂಪಾಂತರ, ಮನಸ್ಸು ತನ್ನ ಮೇಲ್ಗಡೆಯ ತತ್ವದಲ್ಲಿ ಪರಿವರ್ತನಗೊಳ್ಳುವಂತೆ ಚೈತನ್ಯದ ರೂಪಾಂತರ ಸಿದ್ಧಿಗೊಳ್ಳುವುದು ಅಗತ್ಯ. ಈ ಪದ್ಧತಿಯನ್ನು ಪ್ರಾಚೀನಕಾಲದ ಮಾನಸಿಕ ಸಂಯಮ ಹಾಗೂ ಯೋಗ ವಿಧಾನಗಳಿಂದ ಅನುಸರಿಸಬಹುದು. **(ಸಂಗ್ರಹ)**

ಹಾ.ರಾ.ರವರ ಮಧುರ ಬಾಂಧವ್ಯವನ್ನು ತಿಳಿಸುತ್ತಾ ಎಲ್ಲರೂ ಹೆಚ್ಚು ಕನ್ನಡ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳುವುದರೊಂದಿಗೆ ಜೀವನದಲ್ಲಿ ಹಾಸ್ಯವನ್ನು ಅಳವಡಿಸಿಕೊಳ್ಳಬೇಕೆಂದರು.



ವಿಜಯಕರ್ನಾಟಕ ದಿನಪತ್ರಿಕೆಯ ಸಂಪಾದಕರಾದ ಶ್ರೀ ವಿಶ್ವೇಶ್ವರಭಟ್‌ರವರು ಪುಸ್ತಕದ ಬಗ್ಗೆ ಮಾತನಾಡುತ್ತಾ ನಾನು ಕಂಡ ಯುವಕರಲ್ಲಿ ಯಾವುದೇ ಮುಜುಗರವಿಲ್ಲದೆ ಬೆರೆಯುವ, ಅವರಿಗೆ ಸ್ಫೂರ್ತಿ ನೀಡುವ, ಇಬ್ಬರು ಹಿರಿಯ ಸಾಹಿತಿಗಳೆಂದರೆ ಶ್ರೀ ಗೋಪಾಲಕೃಷ್ಣ ಅಡಿಗ ಮತ್ತು ಹಾ.ರಾ.ರವರೆಂದು ತಿಳಿಸುತ್ತಾ ಶ್ರೀ ಅಡಿಗರವರ ಸಖ್ಯದಲ್ಲಿ ತಾವು ಹಿಂದೆ ಕಳೆದ ಹಲವಾರು ನೆನಪುಗಳನ್ನು ಮೆಲುಕು ಹಾಕುತ್ತಾ ಶ್ರೀ ದಿವಾಕರ್‌ರವರ ಮೂಲಕ ಶ್ರೀ ಹಾ.ರಾ.ರವರ ತಮ್ಮ ಪರಿಚಯ, ಚರ್ಚೆ, ಮಧುರ ಬಾಂಧವ್ಯ ಮತ್ತು ಅವರ ವ್ಯಕ್ತಿತ್ವದ ಬಗ್ಗೆ ವಿವರಿಸಿದರು.

ಪುಸ್ತಕದ ಬಗ್ಗೆ ಮಾತನಾಡುತ್ತಾ ನ್ಯಾಯವಾದಿಗಳಲ್ಲಿ ಹಾಸ್ಯ ಸಾಹಿತ್ಯ ರಚಿಸುವವರಲ್ಲಿ ಇಬ್ಬರು – ಹಾ.ರಾ.ರವರು ಮತ್ತು ಚಂದ್ರಶೇಖರ್‌ರವರು. ಆದರೆ ಹಾ.ರಾ.ರವರ ಸಾಹಿತ್ಯ ಅರ್ಥಗರ್ಭಿತವಾದದ್ದು, ಹಾಸ್ಯದ ರೂಪದಲ್ಲಿ ಜೀವನದ ದೈನಂದಿನ ಆಗುಹೋಗುಗಳನ್ನು ಚಿತ್ರಿಸುವ ನೈಪುಣ್ಯತೆ ಪಡೆದುಕೊಂಡಿದ್ದಾರೆ. ಇಂದಿನ ಗಂಭೀರ ವಿದ್ಯಮಾನಗಳ ಸಮಾಜದಲ್ಲಿ ಹಾಸ್ಯ ಸಾಹಿತ್ಯ ರಚಿಸುವುದು ಕಷ್ಟದ ಕೆಲಸ. ಅದರಲ್ಲೂ ವಕೀಲ ವೃತ್ತಿಯಲ್ಲಿದ್ದುಕೊಂಡೂ ಹಾ.ರಾ.ರವರ ಈ ಸಾಧನೆ ಹೆಮ್ಮೆ ತರುವಂಥದ್ದು. ಇಂದಿನ ದಿನಗಳಲ್ಲಿ ಓದುಗರು ಹಾಸ್ಯ ಬರಹಗಳನ್ನು ಹಾಸ್ಯರೂಪದಲ್ಲಿ ಸ್ವೀಕರಿಸದೆ ಗಂಭೀರವಾಗಿ ಪರಿಗಣಿಸಿ ಕಾನೂನಿನ ಚೌಕಟ್ಟಿನಲ್ಲಿ ಲೇಖಕರನ್ನು ಸಿಕ್ಕಿಸುವ ಪ್ರಯತ್ನ ನಡೆಯುತ್ತಲೇ ಇವೆ. ಹಾಸ್ಯ ಎಂದೂ ಓದುಗರ ಮನೋಲ್ಲಾಸಕ್ಕಾಗಿಯೇ ಹೊರತು ಅನ್ಯಥಾ ಭಾವಿಸಬಾರದು ಎಂದರು.

ಖ್ಯಾತ ಕತೆಗಾರರು ಹಾಗೂ ವಿಮರ್ಶಕರಾದ ಶ್ರೀ ಎಸ್. ದಿವಾಕರ್‌ರವರು ಮಾತನಾಡುತ್ತಾ ತಮ್ಮ ಹಾಗೂ ಹಾ.ರಾ.ರವರ ಸುದೀರ್ಘ ಸ್ನೇಹಬಾಂಧವ್ಯದ ಬಗ್ಗೆ ವಿವರಿಸುತ್ತಾ ಹಿಂದಿನ ತಮ್ಮ ಹಲವಾರು ನೆನಪುಗಳನ್ನು ಸಭೆಯಲ್ಲಿ ಮಂಡಿಸಿ ಶ್ರೀ ಹಾ.ರಾ.ರವರು ತಮ್ಮ ಹಾಸ್ಯ ಸಾಹಿತ್ಯದಲ್ಲಿ ಅಳವಡಿಸಿಕೊಳ್ಳುವ ವಿಷಯಗಳು ಸಮಾಜದಲ್ಲಿನ ಹಲವಾರು ಪ್ರಚಲಿತ ವಿದ್ಯಮಾನ ಹಾಗೂ ಮನುಜ ನಿತ್ಯಜೀವನಕ್ಕೆ ಅವಶ್ಯಕವಾದ ವಿಷಯಗಳ ಬಗ್ಗೆ ಅಳವಡಿಸಿಕೊಂಡಿರುತ್ತಾರೆ ಹಾಗೂ ಅವುಗಳ ಬಗ್ಗೆ ಒತ್ತು ಕೊಟ್ಟು ಹಾಸ್ಯರೂಪದಲ್ಲಿ ಓದುಗರ ಮನ ಮುಟ್ಟುವಂತೆ ರಚಿಸುತ್ತಿರುವುದು ಅವರ ಒಂದು ವಿಶಿಷ್ಟ ಶೈಲಿ ಎಂದರು. ಈ ಪುಸ್ತಕದಲ್ಲಿನ ಸುಮಾರು ಇಪ್ಪತ್ತೈದು ರಚನೆಗಳೂ ಕೂಡ ಒಂದೇ ಕ್ಷೇತ್ರವನ್ನು ಆಯ್ದುಕೊಂಡಂತವಲ್ಲವೆನ್ನುತ್ತಾ ಪುಸ್ತಕದಲ್ಲಿನ ಹಲವಾರು ಭಾಗಗಳನ್ನು ಉದಾಹರಿಸಿ ವಿವರಿಸಿ ಸುದೀರ್ಘವಾಗಿ ಮಾತನಾಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷರಾದ ಶ್ರೀ ಡಿ.ಎಲ್. ಜಗದೀಶ್‌ರವರು ಮಾತನಾಡುತ್ತಾ ಮಾನವನಿಗೆ ಜೀವನದಲ್ಲಿ ಹಾಸ್ಯ ಆರೋಗ್ಯ ದೃಷ್ಟಿಯಿಂದಲೂ ಮತ್ತು ಜ್ಞಾನದ ದೃಷ್ಟಿಯಿಂದಲೂ ಮತ್ತು ವ್ಯವಹಾರಿಕ ದೃಷ್ಟಿಯಿಂದಲೂ ಎಷ್ಟು ಅವಶ್ಯಕ, ಎಂಥ ಗಂಭೀರ ಸಮಸ್ಯೆಗಳನ್ನೂ ಕೂಡ ಲಘು ಹಾಸ್ಯದಿಂದ ಪರಿಹಾರ ಕಂಡುಕೊಳ್ಳಬಹುದು. ಹಾಸ್ಯ ಸಾಹಿತ್ಯ ಓದುವುದರಿಂದ ಆರೋಗ್ಯಕ್ಕೆ ಹಿತ ಅದರಲ್ಲೂ ವಿಶೇಷವಾಗಿ ಹಾ.ರಾ.ರವರ ಸಾಹಿತ್ಯವನ್ನು ತಾವು ತಪ್ಪದೆ ಕೊಂಡು ಓದಬೇಕೆಂದು ವಿನಂತಿಸಿದರು.

ಸಂಘದ ಖಜಾಂಚಿಗಳಾದ ಶ್ರೀ ಎ.ಪಿ. ರಂಗನಾಥ್‌ರವರು ಅತಿಥಿಗಳೆಲ್ಲರಿಗೂ ವಂದನೆ ಸಲ್ಲಿಸಿದರು. ಸಭೆಯ ನಿರೂಪಣಾ ಕಾರ್ಯವನ್ನು ಪಿ.ಆರ್. ಗೋಪಾಲಸ್ವಾಮಿರವರು ನಿರ್ವಹಿಸಿದ್ದರು.

**ವರದಿ : ಎಸ್. ಗೋಪಾಲ್**

## WWW – ಮ್ಯಾರೇಜ್ – ಡಾಟ್‌ಕಾಂ

('ನಗೆಯು ಬರುತಿದೆ' ನಮ್ಮ ಹಾ.ರಾ. ಅವರ ಲೇಟೆಸ್ಟ್ ಪ್ರಾಡಕ್ಟ್. ಇದೊಂದು ಸಂಗ್ರಹಯೋಗ್ಯ ಪುಸ್ತಕ. ಈ ಪುಸ್ತಕದಲ್ಲಿ ಹಾ.ರಾ.ರವರು ಅತ್ಯುನ್ನತ ಮಟ್ಟದ, ಶುದ್ಧ ಹಾಸ್ಯ ಸೃಷ್ಟಿಯೊಂದನ್ನೇ ಮಾಡಿಲ್ಲ ಜೀವನ ದರ್ಶನವನ್ನೂ ಕಾಣಿಸಿದ್ದಾರೆ. ಅವರ ಮನಸ್ಸು ಎಷ್ಟು ಸೂಕ್ಷ್ಮ, ಅವರ ನೋಟ ಎಷ್ಟೊಂದು ತೀಕ್ಷ್ಣ ಅನ್ನುವುದನ್ನು ತಿಳಿಯಲು ಕನ್ನಡಿಗರು ಅವರ ಈ ಪುಸ್ತಕವನ್ನು ಓದಬೇಕು. ನಮ್ಮ ವಕೀಲ ಸಮುದಾಯದಲ್ಲಿ ಇಂತಹ ಒಬ್ಬ ಸೂಕ್ಷ್ಮಗ್ರಾಹಿ ಲೇಖಕರಿದ್ದಾರೆಂಬುದೇ ಒಂದು ಹೆಮ್ಮೆ. ಅವರ ಈ ಪುಸ್ತಕದ ಒಂದು ಲೇಖನ **''WWW- ಮ್ಯಾರೇಜ್-ಡಾಟ್‌ಕಾಂ''** ಅನ್ನು 'ಸಂವಾದ' ಓದುಗರಿಗಾಗಿ ವಿಶೇಷವಾಗಿ ಪ್ರಕಟಿಸುತ್ತಿದ್ದೇವೆ. ಈ ಲೇಖನ ಓದುಗರಿಗೆ ಎಷ್ಟೊಂದು ಆತ್ಮೀಯವಾಗುತ್ತದೆ ಎಂಬುದನ್ನು ಓದಿಯೇ ತಿಳಿಯಬೇಕು. ಇದೋ ಓದಿ.)

'ಎದುರು ಮನೆಯಲ್ಲಿ ಗಂಡ್ಹಿಟ್ಕೊಂಡು ಊರೂರು ಅಲೀತಿದೀಯಲ್ಲ ವರಾನ್ವೇಷಣೆಗೆ' ಅಂತ ಕನಕಲಕ್ಷ್ಮಮ್ಮ ಹುಬ್ಬು ಹಾರಿಸುತ್ತ ಹೇಳಿದಾಗ ಕಾಶಿಪತಿಯ ಹೊಟ್ಟೆಯಲ್ಲಿ ಒಂದು ಕ್ಷಿಪ್ರ ಕ್ರಾಂತಿ ನಡೆಯಿತು ಫಿಜಿಯಲ್ಲಿ ನಡೆದ ಹಾಗೆ. ಒಬ್ಬ ಕ್ರೂರ ರೆಬೆಲ್ ನಾಯಕನಂಥ ಭಯಂಕರ ತೇಗು ಹೊರಬಂದು ಕಾಶಿಪತಿಯನ್ನು ಎಚ್ಚರಿಸಿತು. ಕಾಶಿಪತಿ ಗೊಡ್ಡು ಸಂಪ್ರದಾಯಸ್ಥನಾದರೂ ವ್ಯವಹಾರ ಜ್ಞಾನಕ್ಕೇನೂ ಕಡಿಮೆ ಇರಲಿಲ್ಲ. ಮಗಳು ಕಂಪ್ಯೂಟರ್ ಬಿ.ಎಸ್.ಸಿ. ತುಂಬಾ ಜಾಣೆ. ಮದುವೆ ಮಾಡಬೇಕೆಂದು ಕಾಶಿಪತಿ ತರದೂದಿನಲ್ಲಿದ್ದ. ಎದುರ ಮನೆ ಗೃಹಸ್ಥನೇ ಮಹಾ ಪ್ರತಿಷ್ಠೆಯ ಶ್ಯಾಮಭಟ್ಟ. ಮಗ ಕಂಪ್ಯೂಟರ್ ಇಂಜಿನಿಯರ್. ಹೆಣ್ಣುಗಳಿಗೇನು? ಮನೆ ಮುಂದೆ ಕ್ಯೂ ನಿಂತ್ಕೊಳ್ತಾರೆ ಎನ್ನುವ ಜಂಬ. ದುರಹಂಕಾರ ದೊಡ್ಡಸ್ತಿಕೆ ಪಿತ್ರಾರ್ಜಿತ. ಪೌರೋಹಿತ್ಯದಲ್ಲಿ ಲಕ್ಷಗಟ್ಟಲೆ ದುಡಿದು ಗಂಟು ಮಾಡಿದ್ದ. ಅಪರಕರ್ಮಗಳ ಕಾಂಟ್ರಾಕ್ಟ್, ದುಡ್ಡು ಚೆನ್ನಾಗಿ ಸೇರಿತ್ತು. ಶ್ರಾದ್ಧಪ್ರಿಯ ! ಇಂಗ್ಲಿಷ್ ಪೇಪರ್, ಓದುವಷ್ಟು ಭಾಷಾಜ್ಞಾನವೂ ಇತ್ತು. ಬದುರುಮನೆ ಕಾಶಿಪತಿ ಬಗ್ಗೆ ತಾತ್ಸಾರ ಮೂದಲಿಕೆ. 'ಪ್ರೊಫೆಷನಲ್ ಜಲಸಿ' ಇರಬೇಕು! ಇಬ್ಬರ ಮನೆಯಲ್ಲೂ ದರ್ಭೆ ಸಮಿತ್ತುಗಳು ಒಂದು ಕಾಲದಲ್ಲಿ ರಾಶಿರಾಶಿಯಾಗಿ ಬಿದ್ದಿರುತ್ತಿದ್ದವು. ಈಗ ಮಕ್ಕಳ ಕಾಲಕ್ಕೆ ಟಿ.ವಿ., ಕಂಪ್ಯೂಟರ್, ಮ್ಯೂಸಿಕ್ ಸಿಸ್ಟಮ್ ಮನೆಯನ್ನು ಅಲಂಕರಿಸಿದ್ದವು. ಗ್ರಹಣದ ದಿವಸ ಕಾಶಿಪತಿ ಟಿ.ವಿ. ಮೇಲೆ ದರ್ಭೆ ಇಟ್ಟಿದ್ದ. ಗ್ರಹಣದ ಕ್ರೂರದೃಷ್ಟಿ ಅದಕ್ಕೆ ತಾಕದೆ ಇರಲಿ ಅಂತ. ಆದರೆ ಮಗಳು ಗ್ರಹಣದ ಚಿತ್ರಗಳನ್ನು ನೋಡಿದ್ದು ಟಿ.ವಿ.ಯಲ್ಲೇ!

(ಮುಂದುವರಿಯುವುದು....)

ಪ್ರಕಾಶಕರು : ಲಹರಿ ವಕೀಲರ ವೇದಿಕೆ, ಸಂ. ೨೯೮೦ ''ಲಕ್ಷ್ಮೀದೀಪ್'', ೧೭ನೇ ಅಡ್ಡರಸ್ತೆ, ಬನಶಂಕರಿ ೨ನೇ ಹಂತ, ಬೆಂಗಳೂರು–೫೬೦೦೭೦. ಮುದ್ರಕರು : ಪರಿಮಳ ಮುದ್ರಣಾಲಯ ಮೌಂಟ್‌ಜಾಯ್ ಬಡಾವಣೆ, ಹನುಮಂತನಗರ, ಬೆಂಗಳೂರು–೫೬೦೦೧೯, ದೂರವಾಣಿ : ೬೫೨೫೫೧೬, ಸಂಪಾದಕರು : ಜಿ. ಎಸ್. ನಟರಾಜನ್, ಸಹ ಸಂಪಾದಕರು : ವಿ. ಎನ್. ಮೂರ್ತಿ